ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

17

ಇಲಾಖೆ / ವಿಷಯ : DEPARTMENT / SUBJECT: ಆರ್ಥಿಕ

ಪತ್ರಿಕೆಯ ಹೆಸರು : NAME OF THE NEWS PAPER: ಪ್ರಜಾವಾಣಿ        ದಿನಾಂಕ : DATE 10/7/2020

ಆರ್ಥಿಕ ಸಂಕಷ್ಟದ ಮಧ್ಯೆ ರಾಜ್ಯ ಸರ್ಕಾರದಿಂದ ತಿರುಮಲದಲ್ಲಿ ಸೌಲಭ್ಯ

# ₹ 26 ಕೋಟಿಯಲ್ಲ 200 ಕೋಟಿ!

ಪ್ರ.ವಾ. 10-7-2020

• ರಾಜೇಶ್ ರೈ ಚಟ್ಲ

ಬೆಂಗಳೂರು: ತಿರುಪತಿಯ ತಿರುಮಲದಲ್ಲಿ ಕರ್ನಾಟಕ ರಾಜ್ಯ ಛತ್ರಕ್ಕೆ ಸೇರಿದ ಜಾಗದಲ್ಲಿ ನೂತನ ವಸತಿ ಸಮುಚ್ಚಯ ನಿರ್ಮಾಣವೂ ಸೇರಿದಂತೆ ವಿವಿಧ ಕಾಮಗಾರಿಗಳಿಗೆ ₹ 200 ಕೋಟಿ ಮೊತ್ತದ ಅಂದಾಜು ಪಟ್ಟಿಗೆ ರಾಜ್ಯ ಸರ್ಕಾರ ಅನುಮೋದನೆ ನೀಡಿದೆ.

ವರ್ಷದ ಹಿಂದೆ (2019ರ ಜುಲೈ 16) ಎಚ್.ಡಿ. ಕುಮಾರಸ್ವಾಮಿ ನೇತೃತ್ವದ ಸಮ್ಮಿಶ್ರ ಸರ್ಕಾರ ತಿರುಮಲದಲ್ಲಿ ವಸತಿ ಸಮುಚ್ಚಯ ನಿರ್ಮಿಸಲು ₹ 26 ಕೋಟಿಯ ಅಂದಾಜು ಪಟ್ಟಿಗೆ ಅನುಮೋದನೆ ನೀಡಿತ್ತು. ಅದನ್ನು ಕೈಬಿಟ್ಟು ಕೊರೊನಾ ಬಿಕ್ಕಟ್ಟು, ಆರ್ಥಿಕ ಸಂಕಷ್ಟದ ನಡುವೆಯೇ ಪರಿಷ್ಕೃತ ಯೋಜನೆಗೆ ಸರ್ಕಾರ ಸಮ್ಮತಿ ಸೂಚಿಸಿದೆ.

ಹೊಸ ಆದೇಶದ ಪ್ರಕಾರ, ತಿರುಮಲ ತಿರುಪತಿ ದೇವಸ್ಥಾನ (ಟಿಟಿಡಿ) ಮಂಡಳಿ ಇಡೀ ಯೋಜನೆಯನ್ನು ಕಾರ್ಯಗತಗೊಳಿಸಲಿದ್ದು, ₹ 200 ಕೋಟಿಯನ್ನು (ತೆರಿಗೆ ಹೊರತುಪಡಿಸಿ) ಮಂಡಳಿಗೆ ನೀಡಬೇಕಿದೆ. ಗಾಯತ್ರಿ ಆಂಡ್ ನಮಿತ್ ಆರ್ಕಿಟೆಕ್ಟ್ಸ್ (ಜಿಎನ್ಎ) ಮತ್ತು ಡಿಸೈನ್ ವೆಂಚರ್ ಕನ್ಸಲ್ಟೆಂಟ್ ಕಂಪನಿಗಳು ವಿನ್ಯಾಸ ಮತ್ತು ತಾಂತ್ರಿಕ ಕೆಲಸ ನಿರ್ವಹಿಸಲಿವೆ.

ಹಿಂದಿನ ಸರ್ಕಾರ, ರಾಜ್ಯಕ್ಕೆ ಸೇರಿದ 7 ಎಕರೆ 5ಗುಂಟೆ ಜಾಗದ ಪೈಕಿ, 61,390 ಚದರ ಅಡಿ ಜಾಗದಲ್ಲಿ ವಸತಿ ಸಮುಚ್ಚಯ ನಿರ್ಮಿಸಲು ಒಪ್ಪಿಗೆ ನೀಡಿತ್ತು. ಇಡೀ ಯೋಜನೆಯ ಕಾಮಗಾರಿಯನ್ನು ಲೋಕೋಪಯೋಗಿ ಇಲಾಖೆ ನಿರ್ವಹಿಸಬೇಕೆಂದು ಷರತ್ತು ಹಾಕಿತ್ತು.

**ಪ್ರಜಾವಾಣಿ ವಿಶೇಷ**

ವೆಚ್ಚ ಹೆಚ್ಚಳದ ಬಗ್ಗೆ ಪ್ರತಿಕ್ರಿಯಿಸಿದ ಮುಜರಾಯಿ ಇಲಾಖೆ ಆಯುಕ್ತರಾದ ರೋಹಿಣಿ ಸಿಂಧೂರಿ, 'ಈ ಹಿಂದೆ ಮಂಜೂರಾತಿ ನೀಡಿದ್ದ ಯೋಜನೆಯು ಮುಂದುವರಿದಿರಲಿಲ್ಲ. ಈಗ ಹೊಸದಾಗಿ ಏಳು ಎಕರೆ ಭೂಮಿಯಲ್ಲಿ ಮೂರು ಕಾಂಪ್ಲೆಕ್ಸ್, ಕಲ್ಯಾಣ ಮಂಟಪ ನಿರ್ಮಾಣ ಸೇರಿದಂತೆ ಸಂಪೂರ್ಣ ಅಭಿವೃದ್ಧಿಗೆ ಯೋಜನೆ ಸಿದ್ಧಪಡಿಸಲಾಗಿದೆ' ಎಂದರು.

7ನೇ ಪುಟ ನೋಡಿ

ಬಂಡವಾಳ ತರಲು ₹12 ಕೋಟಿ! 7

### 2019 ಜುಲೈನಲ್ಲಿ ಒಪ್ಪಿಗೆ ನೀಡಿದ್ದ ಅಂದಾಜುಪಟ್ಟಿ

| ಯಾವುದು | ಎಷ್ಟು |
|---|---|
| ಸಿವಿಲ್ ಕಾಮಗಾರಿ (ಗೋಪುರ, ಮೊದಲ, ಎರಡನೇ ಮಹಡಿ) | 17.21 ಕೋಟಿ |
| ಕೊಳವೆ ಬಾವಿ, ಸಬ್ ಮರ್ಸಿಬಲ್ ಪಂಪ್ | 7 ಲಕ್ಷ |
| ವಿದ್ಯುದೀಕರಣ | 17 ಲಕ್ಷ |
| ಒಳಚರಂಡಿ, ನೀರಿನ ಪೈಪ್ ವ್ಯವಸ್ಥೆ | 1.29 ಕೋಟಿ |
| ವಿದ್ಯುತ್ ಸಂಪರ್ಕ, ಟ್ರಾನ್ಸ್‌ಫಾರ್ಮರ್ | 3 ಲಕ್ಷ |
| ವಾಸ್ತು ವಿನ್ಯಾಸ | 20 ಲಕ್ಷ |
| ಅಗ್ನಿಶಾಮಕ ವ್ಯವಸ್ಥೆ | 30 ಲಕ್ಷ |
| ಗುಣಮಟ್ಟ ನಿಯಂತ್ರಣ ಶುಲ್ಕ | 8.60 ಲಕ್ಷ |
| ಮಳೆ ನೀರು ಮರುಪೂರಣ ವ್ಯವಸ್ಥೆ, ಇಂಧನ ಉಳಿತಾಯಕ್ಕೆ | 10 ಲಕ್ಷ |
| ಲಿಫ್ಟ್ ವ್ಯವಸ್ಥೆ ಕಲ್ಪಿಸಲು | 70 ಲಕ್ಷ |
| ಟೆಂಡರ್ ಪ್ರೀಮಿಯಂ | 2.20 ಕೋಟಿ |
| ಹೆಚ್ಚಳಗೊಂಡ ದರ | 1.76 ಕೋಟಿ |
| ಇತರ ಮತ್ತು ಅನಿರೀಕ್ಷಿತ ವೆಚ್ಚ | 6.46 ಲಕ್ಷ |
| ಒಟ್ಟು | 26 ಕೋಟಿ |

### ತಿರುಮಲದಲ್ಲಿ ಅಭಿವೃದ್ಧಿ- ಹೊಸ ಅಂದಾಜುಪಟ್ಟಿ

| ಯಾವುದು | ಎಷ್ಟು (₹ ಕೋಟಿಗಳಲ್ಲಿ) |
|---|---|
| ವಸತಿ ಸಮುಚ್ಚಯ ಬ್ಲಾಕ್ 1 | 45.34 |
| ವಸತಿ ಸಮುಚ್ಚಯ ಬ್ಲಾಕ್ 2 | 42.60 |
| ಸೂಟ್ ಬ್ಲಾಕ್ | 40.94 |
| ಕರ್ನಾಟಕ ಪ್ರವಾಸಿ ಸೌಧದ ನವೀಕರಣ | 20.41 |
| ಮಂಟಪ | 17.19 |
| ಮೂಲಸೌಕರ್ಯ ಅಭಿವೃದ್ಧಿ | 22.26 |
| ವಿನ್ಯಾಸ, ಕನ್ಸಲ್ಟೆನ್ಸಿ | 4.71 |
| ಇತರ ತಾಂತ್ರಿಕ ವಿನ್ಯಾಸ ಕನ್ಸಲ್ಟೆನ್ಸಿ | 4.71 |
| ಒಟ್ಟು | 198.17 |



ಈ ಹಿಂದಿನ ಯೋಜನೆ ಬಗ್ಗೆ ನನಗೆ ಗೊತ್ತಿಲ್ಲ. ಎರಡು ದಶಕಗಳಿಂದ ಯಾತ್ರಾರ್ಥಿಗಳಿಗೆ ಸೌಲಭ್ಯ ಕಲ್ಪಿಸಲು ಸಾಧ್ಯವಾಗಿಲ್ಲ. ಹೊಸ ಯೋಜನೆಗೆ ಈ ತಿಂಗಳಲ್ಲಿಯೇ ಶಿಲಾನ್ಯಾಸ ನಡೆಯಲಿದೆ

**ಕೋಟ ಶ್ರೀನಿವಾಸ ಪೂಜಾರಿ**
ಮುಜರಾಯಿ ಸಚಿವ



ಯೋಜನೆಯನ್ನು ₹ 200 ಕೋಟಿಗೆ ಹೆಚ್ಚಿಸಿ ಪರಿಷ್ಕರಿಸಿರುವುದು ಮತ್ತು ಟಿಟಿಡಿ ಮಂಡಳಿಗೇ ಯೋಜನೆಯ ಜಾರಿಯನ್ನು ವಹಿಸಿರುವುದು ಅನುಮಾನಕ್ಕೆ ಕಾರಣವಾಗುತ್ತದೆ

**ಎಚ್.ಡಿ. ಕುಮಾರಸ್ವಾಮಿ**
ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

# ₹ 26 ಕೋಟಿ ಬದಲು 200 ಕೋಟಿ!

ಒಂದನೇ ಪುಟದಿಂದ

'ಕಾಮಗಾರಿಯನ್ನು ನಾವೇ ಮಾಡಿದರೆ ನಮ್ಮ ಗುತ್ತಿಗೆದಾರರು ಬೆಟ್ಟದ ಕೆಳಗಡೆಯಿಂದ ನಿರ್ಮಾಣ ಸಾಮಗ್ರಿಗಳನ್ನು ತೆಗೆದುಕೊಂಡು ಹೋಗಲು ಟಿಟಿಡಿ ಮಂಡಳಿಯ ಅನುಮತಿ ಬೇಕಾಗುತ್ತದೆ. ಅಲ್ಲದೆ, ವೆಚ್ಚವೂ ಜಾಸ್ತಿಯಾಗುತ್ತದೆ. ಮಂಡಳಿಯಲ್ಲಿ ಕಾಮಗಾರಿ ನಡೆಸುವ ವಿಭಾಗವೇ ಇದೆ. ಹೀಗಾಗಿ ಅವರಿಗೆ ವಹಿಸಲಾಗಿದೆ' ಎಂದು ಅವರು ಹೇಳಿದರು.

## ಬಂಡವಾಳ ತರಲು ₹12 ಕೋಟಿ!

ರಾಜ್ಯಕ್ಕೆ ವಿದೇಶಿ ಬಂಡವಾಳವನ್ನು ತರುವ ಸಲುವಾಗಿ ಅಂತರರಾಷ್ಟ್ರೀಯ ಏಜೆನ್ಸಿಯನ್ನು ನೇಮಿಸಲು ಮುಂದಾಗಿರುವ ರಾಜ್ಯ ಸರ್ಕಾರ, ಇದಕ್ಕಾಗಿ ₹12 ಕೋಟಿ ವೆಚ್ಚ ಮಾಡಲು ಮುಂದಾಗಿದೆ.

'ಬೋಸ್ಟನ್ ಕನ್ಸಲ್ಟಿಂಗ್ ಗ್ರೂಪ್ ಇಂಡಿಯಾ ಲಿಮಿಟೆಡ್' ಅನ್ನು 12 ತಿಂಗಳ ಅವಧಿಗೆ ಸಮಾಲೋಚಕ ಸಂಸ್ಥೆಯಾಗಿ ನೇಮಿಸಿಕೊಳ್ಳಲಾಗುವುದು. ಇದಕ್ಕೆ ವೃತ್ತಿಪರ ಶುಲ್ಕ ₹12 ಕೋಟಿ ನಿಗದಿ ಮಾಡಲಾಗಿದೆ. ಸಂಸ್ಥೆಯವರು ಅಂತರ-ರಾಷ್ಟ್ರೀಯ ಹೂಡಿಕೆದಾರರನ್ನು ರಾಜ್ಯಕ್ಕೆ ಕರೆತಂದು ಹೂಡಿಕೆ ಮಾಡಿಸುತ್ತಾರೆ' ಎಂದು ಸಚಿವ ಸಂಪುಟ ಸಭೆಯ ಬಳಿಕ ಸಚಿವ ಜೆ.ಸಿ. ಮಾಧುಸ್ವಾಮಿ ತಿಳಿಸಿದರು.